ಇಂದು ದಿನಾಂಕಃ **21.01.2020** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ **1** ಮತ್ತು **3** ರವರ ಪರ ವಕೀಲರಿಂದಃ ನಾನು **9** ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಹುಟ್ಟಿದ ದಿನಾಂಕ ದಿಃ **01.03.1977** ಆಗಿರುತ್ತದೆ. ನನ್ನ ಮುತ್ತಾತನ ತಂದೆಯ ಹೆಸರು ಏನು ಎಂದರೆ, ದೊಡ್ಡ ತಮ್ಮಯ್ಯಚಾರ್. ನನ್ನ ಮುತ್ತಾತನ ತಂದೆಯ ಹೆಸರು ದೊಡ್ಡ ತಮ್ಮಯ್ಯಚಾರ್ ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಚಂದ್ರಶೇಖರ ಚಾರ್, ನನ್ನ ತಾತನ ಹೆಸರು ಸಿದ್ಧಾಚಾರ್, ನನ್ನ ಮುತ್ತಾತನ ಹೆಸರು ದೊಡ್ಡ ತಮ್ಮಯ್ಯಚಾರ್ ಎಂದರೆ ಸರಿ. ಸದರಿ ದೊಡ್ಡ ತಮ್ಮಯ್ಯಚಾರ್ ರವರ ತಂದೆಯ ಹೆಸರು ಏನು ಎಂದರೆ, ಗೊತ್ತಿಲ್ಲ. ದೊಡ್ಡ ತಮ್ಮಯ್ಯಚಾರ್ ರವರೊಂದಿಗೆ ಎಷ್ಟು ಜನ ಅಣ್ಣ-ತಮ್ಮಂದಿರು, ಅಕ್ಕತಂಗಿಯರು ಜನಿಸಿರುತ್ತಾರೆ ಎಂದರೆ, 3 ಜನ ತಮ್ಮಂದಿರು ಹಾಗೂ ಒಬ್ಬರು ತಂಗಿ ಇರುತ್ತಾರೆ. ಅವರೆಂದರೆ ಭೈರಾಚಾರಿ, ಚೆನ್ನಾಚಾರಿ, ಸಿದ್ಧಾಚಾರಿ ಮತ್ತು ಪುಟ್ಟತಾಯಮ್ಮ. ದೊಡ್ಡ ತಮ್ಮಯ್ಯಚಾರ್ ರವರು ಅವರ ತಂದೆ-ತಾಯಿಯ ಒಬ್ಬನೇ ಮಗನಾಗಿದ್ದು ಅವರಿಗೆ ಒಬ್ಬ ಸಹೋದರಿ ಇದ್ದು ಅವರ ಹೆಸರು ಮಂಚುಮ್ಮ ಎಂದರೆ ಸರಿಯಲ್ಲ. ದೊಡ್ಡ ತಮ್ಮಯ್ಯಚಾರ್ ರವರಿಗೆ ಮೂರು ಜನ ಮಕ್ಕಳು ಎಂದರೆ ಸರಿಯಲ್ಲ. ಒಬ್ಬ ಮಗ ಮಾತ್ರ ಇರುತ್ತಾರೆ ದೊಡ್ಡ ತಮ್ಮಯ್ಯಚಾರ್ ರವರಿಗೆ ಸಿದ್ಧಾಚಾರಿ, ಭೈರಾಚಾರಿ, ಚೆನ್ನಾಚಾರಿ ಎಂಬ ಮೂರು ಮಕ್ಕಳು ಎಂದರೆ ಸರಿ.

ನನ್ನ ತಾತ ಸಿದ್ಧಾಚಾರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರೆಂದರೆ ನಿಂಗಮ್ಮ ಮತ್ತು ಕಾಳಮ್ಮ ಎಂದರೆ ಸರಿ. ಸದರಿಯವರು ಪೌತಿಯಾಗಿದ್ದಾರೆ ಎಂದರೆ ಸರಿ. ಸಿದ್ಧಾಚಾರಿಯವರು ದಿಃ **11.11.2001** ರಂದು ನಿಧನರಾಗಿರುತ್ತಾರೆ. ಸಿದ್ಧಾಚಾರಿಯವರು ಅವರ ಜೀವಿತಾವಧಿಯಲ್ಲಿ ಮನೆಯನ್ನು ನಿರ್ಮಾಣ ಮಾಡಿದ್ದರೆ ಎಂದರೆ, ನಾಡಹಂಚಿನ ಕೈ ಮನೆ ಇತ್ತು. ಸದರಿಯವರು ದಿಃ **11.11.2001** ರವರೆಗೆ ಸದರಿ ಮನೆಯಲ್ಲೀ ವಾಸವಾಗಿದ್ದರು ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲೇ ವಾಸವಾಗಿದ್ದರು. ನನ್ನ ತಾತ ಸಿದ್ಧಾಚಾರಿಯವರಿಗೆ ಅವರ ಮೊದಲ ಹೆಂಡತಿ ನಿಂಗಮ್ಮನಿಂದ ಮೂರು ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಎಂದರೆ ಸರಿ. ಅವರೆಂದರೆ ಚಂದ್ರಶೇಖರಾಚಾರ್, ಪುಟ್ಟಸ್ವಾಮಚಾರ್, ನರಸಿಂಹಚಾರ್ ಮತ್ತು ಪುಟ್ಟತಾಯಮ್ಮ. ಚಂದ್ರಶೇಖರಾಚಾರ್ ನನ್ನ ತಂದೆ ಎಂದರೆ ಸರಿ. ಸದರಿಯವರು ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಾತ ಸಿದ್ಧಾಚಾರಿಯವರಿಗೆ ಅವರ ಎರಡನೇ ಹೆಂಡತಿ ಕಾಳಮ್ಮನಿಂದ ಮೂರು ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಎಂದರೆ ಸರಿ. ಅವರೆಂದರೆ ಕೃಷಾಣಾಚರ್,

ಚೆಲುವಾಚಾರ್, ಸಣ್ಣಾಚಾರ್ ಮತ್ತು ಸಾವಿತ್ರಮ್ಮ ಸಾವಿತ್ರಮ್ಮ ಮೃತರಾಗಿರುತ್ತಾರೆ ಕೃಷ್ಣಾಚಾರ್ ಮತ್ತು ಸಣ್ಣಾಚಾರ್ ಮೃತರಾಗಿರುತ್ತಾರೆ ಎಂದರೆ ಸರಿ. ಸದರಿಯವರ ವಾರಸುದಾರರು ಜೀವಂತ ಇದ್ದಾರೆ ಎಂದರೆ ಸರಿ. ನಮ್ಮ ವಂಶವೃಕ್ಷದಲ್ಲಿ ಇವರುಗಳನ್ನು ತೋರಿಸಿರುವುದನ್ನು ಬಿಟ್ಟರೆ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ಪ್ರಸ್ತುತ ದಾವೆಯಲ್ಲಿ 4 ಜನರನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸರಿ ನಮ್ಮ ಚಿಕ್ಕಪ್ಪಂದಿರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವೆಗೆ ಸಂಬಂಧಿಸಿದಂತೆ ವಿಭಾಗವನ್ನು ಯಾರನ್ನು ಕೇಳಿರುತ್ತೀರಿ ಎಂದರೆ, ನಾವು ಯಾರನ್ನು ವಿಭಾಗ ಕೇಳಿರುವುದಿಲ್ಲ, ನಮ್ಮ ಆಸ್ತಿಗೆ ತೊಂದರೆ ಕೊಟ್ಟಿದ್ದರಿಂದ ದಾವೆಯನ್ನು ಸಲ್ಲಿಸಿರುತ್ತೇವೆ. ದಿಃ **11.10.2000** ರಂದು ನನ್ನ ತಾತ ಬದುಕಿದ್ದರು ಎಂದರೆ ಸರಿ. ನನ್ನ ತಾತ ಅವರ ಜೀವಿತಾವಧಿಯಲ್ಲಿ ಸ್ವತ್ತಿನ ಮಾಲೀಕ ತಾನು ಎಂದು ಎಲ್ಲಿಯೂ ದಾವೆಯನ್ನು ಸಲ್ಲಿಸಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯ ವಾದಿ, ಪುಟ್ಟಸ್ವಾಮಾಚಾರ್, ನರಸಿಂಹಚಾರ್, ಚೆಲುವಾಚಾರ್ ರವರು ಓಎಸ್ಃ **92/2000** ರಂತೆ ಪ್ರಸ್ತುತ ದಾವೆಯ **4** ನೇ ಪ್ರತಿವಾದಿಯ ವಿರುದ್ಧ ತೊಂದರೆ ಕೊಡುತ್ತಿದ್ದಾರೆ ಎಂದು ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಓಎಸ್ಃ **272/2009** ರಂತೆ ವಿಭಾಗ ಕೋರಿ ಸಲ್ಲಿಸಿದ್ದ ದಾವೆಯಲ್ಲಿಯೂ ಸಹ ನಾನೇ ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರಸ್ತುತ ದಾವೆಯ **1** ಮತ್ತು **2** ನೇ ಪ್ರತಿವಾದಿಗಳು ಹಾಗೂ **3** ನೇ ಪ್ರತಿವಾದಿಯ ಗಂಡ ಪಕ್ಷಗಾರರಾಗಿದ್ದರು ಎಂದರೆ ಸರಿ. ಅವರು ದಾವೆ ಚಾಲ್ತಿಯಲ್ಲಿದ್ದಾಗ ತೊಂದರೆ ಕೊಟ್ಟಿದ್ದರಿಂದ ಅವರನ್ನು ಸೇರಿಸಲಾಗಿರುತ್ತದೆ. ಓಎಸ್ಃ **92/2000** ರ ದಾವೆಯ ದಾಖಲೆಗಳನ್ನು ಓಎಸ್ಃ **272/2009** ರ ದಾವೆಯಲ್ಲಿ ಪ್ರತಿವಾದಿಗಳು ಹಾಜರು ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾಖಲೆಯನ್ನು ನಿಡಿ **43** ಎಂದು ಗುರುತಿಸಲಾಗಿತ್ತು ಎಂದರೆ ಸರಿಯಲ್ಲ. ಪ್ರಸ್ತುತ ದಾವೆ ಮತ್ತು ಓಎಸ್ಃ **97/2000** ಮತ್ತು ಓಎಸ್ಃ **272/2009** ಗಳಲ್ಲಿ ಒಂದೇ ಆಸ್ತಿಗೆ ಸಂಬಂಧಿಸಿದಂತೆ ಪರಿಹಾರವನ್ನು ಕೋರಲಾಗಿತ್ತು ಎಂದರೆ ಸರಿಯಲ್ಲ. ಪ್ರಸ್ತುತ ದಾವೆ ಮತ್ತು ಓಎಸ್ಃ **272/2009** ರ ಆಸ್ತಿಗಳು ಮಾತ್ರ ಒಂದೇ ಆಸ್ತಿಗಳಾಗಿರುತ್ತವೆ

ನನ್ನ ಚಿಕ್ಕಪ್ಪ ನರಸಿಂಹಚಾರ್ ಓಎಸ್ಃ **159/2009** ರಂತೆ **1** ನೇ ಪ್ರತಿವಾದಿಯ ವಿರುದ್ಧ ದಾವೆಯನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆ ದಿಃ **05.08.2015** ರಂದು ವಜಾಗೊಂಡಿರುತ್ತದೆ ಎಂದರೆ ಗೊತ್ತಿಲ್ಲ. ಓಎಸ್ಃ **159/2009** ರ ದಾಖಲೆಯನ್ನು ಓಎಸ್ಃ **272/2009** ರಲ್ಲಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಓಎಸ್ಃ **272/2009** ರಲ್ಲಿ ನಿಡಿ **31** ಎಂದು ಗುರುತಿಸಲಾಗಿದೆ ಎಂದರೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.